**ದಿನಾಂಕ: 15-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- 2 ರಿಂದ 7 ಮತ್ತು 9 ರಿಂದ 13 ನೇ ಪ್ರತಿವಾದಿಗಳ ಪರ ಶ್ರೀ.ಬಿ.ಟಿ.ಐ, ವಕೀಲರಿಂದಃ-**

01. ನನ್ನ ತಾತನಾದ ಮೂಕ ಮಾರಯ್ಯನವರ ಮಗನಾದ ಗಂಗಯ್ಯನವರು ಯಾವಾಗ ಮೃತ ಪಟ್ಟರು ಎಂದು ನನಗೆ ನೆನಪಿಲ್ಲ. ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಾತನವರು ಮೃತ ಪಟ್ಟ ನಂತರ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಾದ ಕುನ್ನಪ್ಪನವರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ. ನಿಮ್ಮ ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಿಮ್ಮ ತಾತನವರು ಮೃತಪಟ್ಟ ನಂತರ ನಿಮ್ಮ ತಂದೆ ಮತ್ತು ದೊಡ್ಡಪ್ಪನವರ ನಡುವೆ ವಿಭಾಗ ಆಗಿದೆ ಎಂದು ಹೇಳಿರುತ್ತೀರಾ ಮತುತ ಸದರಿ ವಿಷಯಕ್ಕೆ ನೀವೇ ಮಾಹಿತಿಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಭಾಗವು ಯಾವಾಗ ಆಗಿದೆ ಎಂದು ನನಗೆ ನೆನಪು ಇರುವುದಿಲ್ಲ. ನನ್ನ ತಂದೆಯು ಮೃತಪಡುವ ಎಷ್ಟು ವರ್ಷಗಳ ಹಿಂದೆ ಭಾಗ ಆಗಿತ್ತು ಎಂದು ನನಗೆ ನೆನಪಿಲ್ಲ.

02. ವಿಭಾಗವನ್ನು ಮಾಡಿಕೊಳ್ಳುವ ಸಮಯದಲ್ಲಿ ನಮ್ಮ ಕುಟುಂಬದಲ್ಲಿ 5 ಐಟಂ ಸ್ವತ್ತುಗಳು ಇದ್ದವು. ಸದರಿ 5 ಐಟಂ ಸ್ವತ್ತುಗಳನ್ನು ನನ್ನ ತಂದೆ ಮತ್ತು ದೊಡ್ಡಪ್ಪನವರು ಸಮವಾಗಿ ಭಾಗವನ್ನು ಮಾಡಿಕೊಂಡರಾ ಅಥವಾ ಹೆಚ್ಚಾಗಿ ಮಾಡಿಕೊಂಡರಾ ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತುಗಳು ನನ್ನ ತಂದೆಗೆ ವಿಭಾಗದ ಮೂಲಕ ಬಂದಿರುತ್ತದೆ. ಇನ್ನೊಂದು ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಆದರೆ ಅದು ಒಂದುವರೆ ಗುಂಟೆ ಸ್ವತ್ತು ಆಗಿರುತ್ತದೆ ಮತ್ತು ಪ್ರಸ್ತುತ ದಾವೆಯು ನಮ್ಮ ಪರವಾಗಿ ಆದರೆ ನಮಗೆ ಸದರಿ ಒಂದುವರೆ ಗುಂಟೆ ಸ್ವತ್ತನ್ನು

ಬಿಟ್ಟು ಕೊಡುತ್ತೇವೆ ಎಂದು ನಮ್ಮ ಗ್ರಾಮದವರಾದ ಮಾರಯ್ಯನವರ ಮಗನಾದ ಗಂಗಮಾರಯ್ಯನವರು ನನಗೆ ತಿಳಿಸಿರುತ್ತಾರೆ. ಗಂಗಮಾರಯ್ಯನವರು ಸದರಿ ಒಂದುವರೆ ಗುಂಟೆ ಸ್ವತ್ತಿನಲ್ಲಿ ಏನನ್ನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಗಂಗಮಾರಯ್ಯನವರಿಗೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯವರು ಭೋಗ್ಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಪತ್ರವನ್ನು ನಿಮ್ಮ ತಂದೆಯವರು 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಮತ್ತು 2 ನೇ ಪ್ರತಿವಾದಿಯ ಯಜಮಾನರ ಹೆಸರಿಗೆ ಪತ್ರವನ್ನು ಮಾಡುವ ಮೊದಲೇ ಮಾಡಿದ್ದಾರಾ ಎಂದರೆ ಸಾಕ್ಷಿಯು ತದಾನಂತರದಲ್ಲಿ ಮಾಡಿದ್ದಾರೆ ಎನ್ನುತ್ತಾರೆ. ಗಂಗಮಾರಯ್ಯನವರ ಹೆಸರಿಗೆ ಆಗಿರುವ ಭೋಗ್ಯ ಪತ್ರವನ್ನು ನಾನು ಪಡೆದುಕೊಂಡಿರುವುದಿಲ್ಲ.

03. ನಿಪಿ-87 ಮತ್ತು 88 ನ್ನು ನನ್ನ ತಂದೆ ಮತ್ತು ದೊಡ್ಡಪ್ಪ ಇಬ್ಬರೂ ಸೇರಿ ಮಾಡಿಕೊಟ್ಟಿರುತ್ತಾರೆ. ನಿಪಿ-87 ಮತ್ತು 88 ರಲ್ಲಿ ಇರುವ ಸ್ವತ್ತುಗಳು ನನ್ನ ತಂದೆ ಮತ್ತು ದೊಡ್ಡಪ್ಪರವರಿಗೆ ಸೇರಿರುತ್ತದೆ. ನಿಪಿ-87 ಮತ್ತು 88 ನ್ನು ನಿಮ್ಮ ತಂದೆಯವರು ಮಾತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-87 ಮತ್ತು 88 ನ್ನು ನಾನು ಓದಿರುತ್ತೇನೆ. ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**